ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯನ್ಯಾಯಿಕ ದಂಡಾಧಿಕಾರಿಗಳು,
ಉಡುಪಿ

ಓ.ಎಸ್ **54/1997**

ಡಿಡಬ್ಲ್ಯುಃ **4**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಹೆಚ್ ರಾಘವೇಂದ್ರ ಶೆಟ್ಟಿ |
| ತಂದೆಯ ಹೆಸರು | ಃ | ಮಂಜಯ್ಯ ಶೆಟ್ಟಿ |
| ವಯಸ್ಸು | ಃ | **46** ವರ್ಷ |
| ಉದ್ಯೋಗ | ಃ | ವಕೀಲರು |
| ವಿಳಾಸ | ಃ | ಉಡುಪಿ |

ದಿಃ **13.09.2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಡಿ.ಎಸ್ ವಕೀಲರಿಂದಃ

ನಾನು **2000** ನೇ ಸಾಲಿನಿಂದ ವಕೀಲ ವೃತ್ತಿಯಲ್ಲಿ ಇದ್ದೇನೆ. ನಾನು ಮೊದಲು ಹೆಚ್ ನರಸಿಂಹ ಶೆಟ್ಟಿ ಎನ್ನುವವರ ಬಳಿ ಪ್ರಾಕ್ಟೀಸ್ ಮಾಡುತ್ತಿದ್ದೆ ಅವರು ನನಗೆ ಮಾವ ಆಗಬೇಕು. **1995** ರಲ್ಲಿ ಅವರು ಸ್ವಂತ ಕಚೇರಿಯನ್ನು ಮಾಡಿದ್ದರು. ಅದಕ್ಕಿಂತ ಮೊದಲು ಅವರು ಕೆ ಬಾಲಚಂದ್ರ ರಾವ್ ಅವರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. **1995** ರಲ್ಲಿ ನನ್ನ ಮಾವನವರ ವಕೀಲರ ಕಚೇರಿಯು ಕಾಳಪ್ಪ ಶೆಟ್ಟಿ ಕೌಂಪೌಂಡ್ ನಲ್ಲಿ ಕಚೇರಿಯನ್ನು ಪ್ರಾರಂಭ ಮಾಡಿದ್ದು. **1997** ರಿಂದ ಪಿಡಬ್ಲ್ಯುಡಿ ಕಚೇರಿ, ಅಜ್ಜರಕಾಡು, ಉಡುಪಿ ಬಳಿ ಕಚೇರಿ ಪ್ರಾರಂಭಿಸಿದರು.

ನನ್ನ ಮಾವನವರು **2006** ಜುಲೈ **26** ರಲ್ಲಿ ತೀರಿಕೊಂಡಿದ್ದಾರೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿ ಸಹಿ ತೋರಿಸಿ ಹೇಳಬಹುದೇ ಎಂದರೆ ಸಾಕ್ಷಿಗೆ ಈಗ ತೋರಿಸಿದ ದಾಖಲೆ ನಿ.ಡಿ**-54** ರಲ್ಲಿ ಸಹಿ ಮತ್ತು ಸೀಲನ್ನು ಗುರುತಿಸಿ ಅದು ನನ್ನ ಮಾವನವರಾದ ಹೆಚ್ ನರಸಿಂಹ ಶೆಟ್ಟಿಯವರ ಸಹಿ ಮತ್ತು ಸೀಲು ಎಂದು ನುಡಿಯುತ್ತಾರೆ. ಸಾಕ್ಷಿ ಗುರುತಿಸಿದ ಸಹಿ ಮತ್ತು ಸೀಲನ್ನು ಒಟ್ಟು ಸೇರಿಸಿ ನಿ.ಡಿ**-54**(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ನಿ.ಡಿ**-55** ಆಗಿರುತ್ತದೆ, ಅದರಲ್ಲಿರುವ ಸಹಿಯನ್ನು ಸಾಕ್ಷಿ ಸದ್ರಿ ಹೆಚ್ ನರಸಿಂಹ ಶೆಟ್ಟಿಯವರ ಸಹಿ ಎಂದು ಗುರುತಿಸಿದ್ದು ಅದನ್ನು ನಿ.ಡಿ**-55**(ಎ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಶ್ರೀ ವಿ ಎಮ್ ಡಿ ವಕೀಲರು ವಾದಿ ಪರವಾಗಿ ಹಾಜರಿರುತ್ತಾರೆ. ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ನಿ.ಡಿ**-57** ಆಗಿರುತ್ತದೆ. ಅದರಲ್ಲಿ ತೋರಿಸಿರುವ ವಿಳಾಸ ಹೆಚ್

ನರಸಿಂಹ ಶೆಟ್ಟಿಯವರದು ಆಗಿರುತ್ತದೆ. ಅದರಲ್ಲಿ ಹೆಚ್ ನರಸಿಂಹ ಶೆಟ್ಟಿಯವರ ಸಹಿ ಇದೆ ಎಂದು ಗುರುತಿಸಿದ್ದು ಸದ್ರಿ ಸಹಿಯನ್ನು ನಿ.ಡಿ**-57**(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದು ಸಂಜೀವ ಮಾಬೆನ್ ಎನ್ನುವವರ ಪ್ರಮಾಣಪತ್ರ ಮಧ್ಯಕಾಲೀನ ಅರ್ಜಿ **2** ಕ್ಕೆ ಸಂಬಂದಪಟ್ಟಂತೆ ಆಗಿರುತ್ತದೆ. ಸದ್ರಿ ಪ್ರಮಾಣಪತ್ರದಲ್ಲಿ ಸಾಕ್ಷಿ ತಮ್ಮ ಸಹಿ ಇದೆ ಎಂದು ಗುರುತಿಸುತ್ತಾರೆ. ಈ ಹಂತದಲ್ಲಿ ಶ್ರೀ ವಿ ಎಮ್ ಡಿ ವಕೀಲರು ವಾದಿಯ ಪರವಾಗಿ ಹಾಜರಿದ್ದಾರೆ, ಸದ್ರಿ ದಾಖಲೆಯನ್ನು ಗುರುತಿಸಲು ಅವರಿಂದ ಯಾವುದೇ ತಕರಾರು ಇಲ್ಲ ಆದ್ದರಿಂದ ಸದ್ರಿ ಪ್ರಮಾಣಪತ್ರವನ್ನು ಪ್ರತಿವಾದಿ ಪರವಾಗಿ ನಿ.ಡಿ**-60** ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಡಿ**-60**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಶ್ರೀ ಡಿಎಸ್ ವಕೀಲರ ಪ್ರಶ್ನೆ: ನಿ.ಡಿ**-60** ಕ್ಕೆ ಸಹಿ ಹಾಕಲು ಆ ದಿನ ಏನಾಗಿದೆ ಎಂದು ಹೇಳಬಹುದೇ. ಈ ಪ್ರಶ್ನೆಗೆ ನಿ.ಡಿ**-60** ದಾಖಲೆ ನ್ಯಾಯಾಲಯದ ದಾಖಲೆ ಆಗಿದ್ದು ಆದ ಕಾರಣ ಅದರಲ್ಲಿ ಇರುವ ವಿಚಾರಗಳನ್ನು ಹೇಳುವ ಹಂತದಲ್ಲಿ ಅದಕ್ಕೆ ಸಂಬಂದಪಟ್ಟಂತೆ ಒಂದು ಅರ್ಜಿಯನ್ನು ಸಲ್ಲಿಸಿ ಅದರ ಮೇಲೆ ಅದಕ್ಕೆ ಏನಾದರೂ ತಕರಾರು ಇದ್ದಲ್ಲಿ ಅದನ್ನು ಪಡೆದು ಆದೇಶ ಆದ ಮೇಲೆ ಈ ಪ್ರಶ್ನೆ ಊರ್ಜಿತ ಎಂದು ಆದೇಶಿಸಲಾಗಿದೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಅನುಮತಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ